**2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.**

**ಓ ಎಸ್ ನಂ.61-2013** **ಡಿ. ಡಬ್ಲ್ಯು: 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಬಸವರಾಜು<br>ಮಲ್ಕುಂಡಿ ಗ್ರಾಮ, ನಂಜನಗೂಡು |
| | **ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ** 13-12-2024. |

**<u>ಪಾಟೀ ಸವಾಲು: ವಾದಿ ಪರ ಶ್ರೀ ಬಿ.ವೈ. ವಕೀಲರಿಂದ:</u>**

ನಾನು ಸುಮಾರು 30 ವರ್ಷಗಳ ಕಾಲ ಶಿಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ನಾನು ಜವಾಬ್ದಾರಿ ಇರುವಂತಹ ವ್ಯಕ್ತಿ ಎಂದರೆ ಸರಿ. ವಾದಿ ನನಗೆ ಈ ದಾವೆಯ ವ್ಯವಹಾರವಾಗುವುದಕ್ಕಿಂತ ಮುಂಚೆ ಪರಿಚಯ ಇರಲಿಲ್ಲ ಎಂದರೆ ಸರಿ. ನಾನು ಮತ್ತು ವಾದಿ ಬೇರೆ ಬೇರೆ ಜನಾಂಗಕ್ಕೆ ಸೇರಿದವರಾಗಿರುತ್ತೇವೆ ಎಂದರೆ ಸರಿ. ನಾನು ಜವಾಬ್ದಾರಿಯುತ ವ್ಯಕ್ತಿ ಆಗಿರುವುದರಿಂದ ಯಾವುದೇ ದಾಖಲೆಗೆ ಸಹಿ ಮಾಡುವ ಪೂರ್ವದಲ್ಲಿ ಓದಿ ತಿಳಿದುಕೊಂಡು ಸಹಿ ಮಾಡುತ್ತೇನೆ ಎಂದರೆ ಸರಿ.

2. ನಾನು ಈ ದಾವೆಯಲ್ಲಿ ನನ್ನ ತಕರಾರನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ. ನನ್ನ ತಕರಾರನ್ನು ಸಮರ್ಥನೆ ಮಾಡಿಕೊಳ್ಳಲು ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ನಿಪಿ-1 ಮತ್ತು 2 ರ ಎಲ್ಲಾ ಪುಟಗಳಲ್ಲಿಯೂ ನನ್ನ ಮತ್ತು ನನ್ನ ಪತ್ನಿಯ ಸಹಿ ಇರುತ್ತದೆ ಎಂದರೆ ಸರಿ.

ನಿಪಿ-1 ಮತ್ತು 2 ನೋಂದಣಿ ಆಗಿರುವ ದಾಖಲಾತಿಗಳು ಆಗಿರುತ್ತವೆ ಎಂದರೆ ಸರಿ. ನಿಪಿ-1 ಮತ್ತು 2 ರಲ್ಲಿ ಬರೆದಿರುವ ಒಕ್ಕಣೆಗಳನ್ನು ಓದಿ ತಿಳಿದುಕೊಂಡ ನಂತರ ನಾನು ಮತ್ತು ನನ್ನ ಪತ್ನಿ ಸಹಿ ಮಾಡಿರುತ್ತೇನೆ ಎಂದರೆ ಸರಿ. ನಿಪಿ-1 ಮತ್ತು 2 ರಲ್ಲಿ ಬರೆದಿರುವ ಒಕ್ಕಣೆ ಬಗ್ಗೆ ನನಗೆ ಮತ್ತು ನನ್ನ ಪತ್ನಿಗೆ ಯಾವುದೇ ಅಸಮಾಧಾನ ಇರುವುದಿಲ್ಲ ಎಂದರೆ ಸರಿ.

3. ಈ ದಾವೆಯನ್ನು ಸಲ್ಲಿಸುವ ಪೂರ್ವದಲ್ಲಿ ವಾದಿಯೂ ತನ್ನ ವಕೀಲರ ಮುಖೇನ ನನಗೆ ನಿಪಿ-3 ರಂತೆ ನೋಟಿಸ್ ನೀಡಲಾಗಿತ್ತು ಎಂದರೆ ಸರಿ. ಸದರಿ ನೋಟಿಸ್ ಅನ್ನು ನಿಪಿ-4 ಮತ್ತು 5 ರಂತೆ ನನ್ನ ಶ್ರೀಮತಿಯವರು ಸ್ವೀಕರಿಸಿರುತ್ತಾರೆ ಎಂದರೆ ಸರಿ. ಪುನಃ ವಾದಿಯೂ ನಿಪಿ-6 ರಂತೆ ನೋಟಿಸ್ ಕಳುಹಿಸಿದ್ದು, ಸದರಿ ನೋಟಿಸ್ ಅನ್ನು ನಾವು ನಿಪಿ-7 ಮತ್ತು 8 ರಂತೆ ಸ್ವೀಕರಿಸಿರುತ್ತೇವೆ ಎಂದರೆ ಸರಿ. ನೋಟಿಸ್ ಬಂದ ನಂತರ ನಾವು ವಾದಿಗೆ ಹಣ ನೀಡಿದ್ದರೂ ಸಹ ನೋಟಿಸ್ ಕಳುಹಿಸಿರುತ್ತಾರೆ ಎಂದು ನಮಗೆ ಅಸಮಧಾನವಾಗಿರುತ್ತದೆ. ವಾದಿ ಕಳುಹಿಸಿದ ನೋಟಿಸುಗಳಿಗೆ ನಮಗೆ ಪ್ರತ್ಯುತ್ತರವನ್ನು ನೀಡಲು ತೊಂದರೆ ಇರಲಿಲ್ಲ. ನನಗೆ ವಾದಿ ಕಳುಹಿಸಿದ ನೋಟಿಸ್ ಬಗ್ಗೆ ಅಸಮಧಾನ ಇರಲಿಲ್ಲ, ಆದರೆ ಅವರಿಗೆ ಪ್ರತ್ಯುತ್ತರವನ್ನು ನೀಡಲು ಅಸಡ್ಡೆ ಇತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನೋಟಿಸ್ ಬಂದ ನಂತರ ನಾನು ವಾದಿಯವರನ್ನು ವಿಚಾರಣೆ ಮಾಡಿರುತ್ತೇನೆ ಎಂದು

ನುಡಿಯುತ್ತಾರೆ. ನಾನು ನೋಟಸ್ ಬಂದ ನಂತರ ವಾದಿಯವರನ್ನು ಭೇಟಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಪ್ರನೋಟ್, ಆಧಾರ ಮತ್ತು ಭೋಗ್ಯದ ಬಗ್ಗೆ ತಿಳುವಳಿಕೆ ಇರುತ್ತದೆ. ಸಾಮಾನ್ಯವಾಗಿ ಯಾವುದೇ ವ್ಯಕ್ತಿ ಸಾಲ ನೀಡಿದ ಸಮಯದಲ್ಲಿ ಪ್ರನೋಟ್, ಆಧಾರ ಪತ್ರ ಮತ್ತು ಭೋಗ್ಯ ಪತ್ರವನ್ನು ಬರೆಸಿಕೊಂಡು ಸಾಲ ನೀಡುತ್ತಾರೆ ಎಂದರೆ ಸರಿ.

(ಮುಂದುವರೆದ ಪಾಟೀ ಸವಾಲಿಗೆ ವಾದಿ ಪರ ವಕೀಲರು ಸಮಯಾವಕಾಶವನ್ನು ಕೋರಿದ್ದು ಸಮಯಾವಕಾಶವನ್ನು ನೀಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/–**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**